# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1428 |
| ಸದಸ್ಯರ ಹೆಸರು | : | ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 10.03.2022 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಸಿಲ್ಕ್‌ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ಮೇಲೂ ರಸ್ತೆಯ ಪಿಲ್ಲರ್ ಸಂಖ್ಯೆ 20 ಮತ್ತು 21ರ ನಡುವಿನ ರಾಷ್ಟ್ರೀಯ ಹೆದ್ದಾರಿಯ 7ರ ನಡುವಿನ ರಸ್ತೆ ವಿಭಜಕಗಳನ್ನು ಅಕ್ರಮವಾಗಿ ತೆರವುಗೊಳಿಸಿರುವುದನ್ನು ತೆರವುಗೊಳಿಸುವ ಪೂರ್ವದಲ್ಲಿದಂತೆ ಮನರ್ನಿಮಿಸಲು, ಮಡಿವಾಳ ಸಂಚಾರ ಪೊಲೀಸ್ ನಿರೀಕ್ಷಕರು ಸಂಬಂಧಿಸಿದ ಪೊಲೀಸ್ ಉಪ ಆಯುಕ್ತರು ಹಾಗೂ ಪೊಲೀಸ್ ಸಹಾಯಕ ಆಯುಕ್ತರಿಗೆ ಸರ್ಕಾರ ಯಾವ ರೀತಿಯ ನಿರ್ದೇಶನವನ್ನು ನೀಡಿದೆ ; | ಸಿಲ್ಕ್‌ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ಮೇಲು ರಸ್ತೆ ಪಿಲ್ಲರ್ ಸಂಖ್ಯೆ 20 ಮತ್ತು 21ರ ನಡುವಿನ ರಾಷ್ಟ್ರೀಯ ಹೆದ್ದಾರಿಯ 7ರ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.<br>▪ ರಸ್ತೆ ವಿಭಜಕಗಳನ್ನು ತೆರವುಗೊಳಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ರಚಿಸಲ್ಪಟ್ಟಿರುವ ರಸ್ತೆ ಸುರಕ್ಷತಾ ಸಮಿತಿಯ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ತೆರವುಗೊಳಿಸಿರುವುದರಿಂದ ಹಾಗೂ ಈ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ, ತೆರವುಗೊಳಿಸಿದ ರಸ್ತೆ ವಿಭಜಕಗಳನ್ನು ಪುನರ್ ನಿರ್ಮಿಸುವ ನಿರ್ಧಾರವನ್ನು ಪೊಲೀಸ್ ಇಲಾಖೆಯು ಸ್ವತಂತ್ರವಾಗಿ ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲ. |
| (ಆ) | ಸದರಿ ಸ್ಥಳದಲ್ಲಿ ಅಪಘಾತವಾಗಿ ಪ್ರಾಣ ಹಾನಿಯಾದಲ್ಲಿ, ಸರ್ಕಾರ ಯಾರನ್ನು ಹೊಣೆಗಾರರನ್ನಾಗಿ ಮಾಡುತ್ತದೆ ; ಈ ಕುರಿತು ಸರ್ಕಾರದ ನಿಲುವೇನು ; | ಸಾರ್ವಜನಿಕರ ಸುಗಮ ಸಂಚಾರ ಹಾಗೂ ಸಂಭವಿಸಬಹುದಾದ ಅಪಘಾತಗಳನ್ನು ತಡೆಗಟ್ಟುವ ಸಲುವಾಗಿ ಹೈರೈಸ್ಡ್ ಪೆಡೆಸ್ಟ್ರೀಯನ್ ಕ್ರಾಸಿಂಗ್ ನಿರ್ಮಾಣ ಮಾಡುವ ನಿರ್ಣಯ ಕೈಗೊಂಡಿದ್ದು, ಸಮಿತಿಯ ನಿರ್ಣಯದಂತೆ ಸಂಭವಿಸಬಹುದಾದ ಅಪಘಾತಗಳನ್ನು ತಡೆಗಟ್ಟುವ ಸಲುವಾಗಿ ಹೈರೈಸ್ಡ್ ಪೆಡೆಸ್ಟ್ರೀಯನ್ ಕ್ರಾಸಿಂಗ್ (ವೈಜ್ಞಾನಿಕ ರಸ್ತೆ ಉಬ್ಬರ) ನಿರ್ಮಾಣ ಮಾಡುವ ಕುರಿತು ಕ್ರಮ ವಹಿಸಲಾಗುತ್ತಿದೆ. |
| (ಇ) | ಖಾಸಗಿ ವ್ಯಕ್ತಿಗಳ ಆಮಿಷಕ್ಕೆ ಒಳಗಾಗಿ ರಸ್ತೆ ವಿಭಜಕಗಳನ್ನು ರಾಷ್ಟ್ರೀಯ ಹೆದ್ದಾರಿ ಮಂತ್ರಾಲಯದ ಅನುಮತಿಯಿಲ್ಲದೆ ಅಕ್ರಮವಾಗಿ ಅನಧಿಕೃತವಾಗಿ ತೆರವುಗೊಳಿಸಿದ ಮಡಿವಾಳ ಸಂಚಾರ ಪೊಲೀಸ್ ನಿರೀಕ್ಷಕರು ಸಂಬಂಧಿತ ಪೊಲೀಸ್ ಉಪ ಆಯುಕ್ತರು ಹಾಗೂ ಪೊಲೀಸ್ ಸಹಾಯಕ ಆಯುಕ್ತರ ಮೇಲೆ ಕಾನೂನು ಕ್ರಮ ಹಾಗೂ ಇಲಾಖಾ ಶಿಸ್ತು ಕ್ರಮ ಕೈಗೊಳ್ಳುವ ಕುರಿತು ಸರ್ಕಾರದ ನಿಲುವೇನು ? | ▪ ರಾಷ್ಟ್ರೀಯ ಹೆದ್ದಾರಿಯ 7ರ ನಡುವಿನ ರಸ್ತೆ ವಿಭಜಕಗಳನ್ನು ಪೊಲೀಸ್ ಇಲಾಖೆಯಿಂದ ತೆರವುಗೊಳಿಸಿರುವುದಿಲ್ಲ.<br>▪ ದಿನಾಂಕ:03.04.2019 ರಂದು ರಸ್ತೆ ಸುರಕ್ಷತಾ ಸಮಿತಿಯ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ತೆರವುಗೊಳಿಸಲಾಗಿರುತ್ತದೆ.<br>▪ ರಸ್ತೆ ವಿಭಜಕಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ತೆರವುಗೊಳಿಸಿರುವುದರಿಂದ, ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವವಾಗುವುದಿಲ್ಲ. |

**ಹೆಚ್‌ಡಿ 112 ಎಸ್‌ಎಸ್‌ಟಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು